## ಅಧ್ಯಕ್ಷರ ನುಡಿ
## ಚಿನ್ನದ ಬಾಗಿಲಿಗೆ ಕಟ್ಟೋಣ ರನ್ನದ ತೋರಣ

ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಈಗ ಚಿನ್ನದ ಹಬ್ಬದ ಸಡಗರ! ಇದೊಂದು ಚರಿತ್ರಾರ್ಹ ಘಟನೆ, ಇದು ಕನ್ನಡಿಗರ, ಕನ್ನಡ ನಾಡು ನುಡಿ ಸಂಸ್ಕೃತಿಯ ಹೆಗ್ಗಳಿಕೆ!! ಇದನ್ನು ಗಳಿಸಿಕೊಟ್ಟ ಮಹನೀಯರು ಅಕಾಡೆಮಿಯ ನಮ್ಮ ಹಿಂದಿನ ಹಿರಿಯ ಅಧ್ಯಕ್ಷರುಗಳು, ಅವರನ್ನು ಹೃದಯಪೂರ್ವಕ ಕೃತಜ್ಞತೆ ಮತ್ತು ಪ್ರಶಂಸೆಗಳೊಂದಿಗೆ ನೆನೆಯಬೇಕಾದ ಸಂದರ್ಭ. ತಮ್ಮ ಕನಸು, ತಮ್ಮ ಧೀಃಶಕ್ತಿ, ತಮ್ಮ ಕ್ರಿಯಾಶಕ್ತಿಗಳೊಂದಿಗೆ ಕಟ್ಟಿದ ಸಾಹಿತ್ಯ ಸರಸ್ವತಿಯ ಮಂದಿರದ ಚಿನ್ನದ ಬಾಗಿಲಿಗೆ ರನ್ನದ ತೋರಣವನ್ನು ಸಮಸ್ತ ಕನ್ನಡಿಗರು ಒಗ್ಗೂಡಿ ಸಾರ್ಥಕ ಭಾವದಿಂದೊಡಗೂಡಿ ಕಟ್ಟಬೇಕಾದ ಸುಸಂದರ್ಭವಿದು!

'ಹಿಂದಣ ಹೆಜ್ಜೆಯನರಿಯಲಾರದೆ, ನಿಂದ ಹೆಜ್ಜೆಯನರಿಯಬಾರದು' ಎಂಬ ಅಲ್ಲಮನ ವಚನದಂತೆ ೧೯ನೆಯ ಅಧ್ಯಕ್ಷಳಾಗಿ ಮೂರು ವರ್ಷದ ನನ್ನ ಅವಧಿಗಾಗಿ ರೂಪಿಸಬೇಕಾದ ಕ್ರಿಯಾ ಯೋಜನೆಗಳ ನೀಲಿನಕ್ಷೆಯ ಮುನ್ನ ಈ ಮೊದಲ ಐವತ್ತು ವರ್ಷಗಳಲ್ಲಿ ಅಧ್ಯಕ್ಷೀಯ ಕಾರ್ಯನಿರ್ವಹಿಸಿದ ಹದಿನೆಂಟು ಜನ ಹಿರಿಯ ಸಾಹಿತಿಗಳು ಕಟ್ಟಿದ ಸಾಧನೆಗಳ ಮಜಲುಗಳನ್ನು ಅವಲೋಕಿಸುವ ಅಪರೂಪದ ಆನಂದ ದೊರಕಿತು. ಈ ಹಿರಿಯರ ಸಾಧನೆಗಳ ಹೆಜ್ಜೆ ಗುರುತಿನ ಜಾಡು ಹಿಡಿದು ಕುತೂಹಲದಿಂದ ನಡೆಯುವಾಗ ರೋಮಾಂಚಿತಳಾಗಿದ್ದೇನೆ. ಅವರ ಕ್ರಿಯಾ ಯೋಜನೆಗಳನ್ನು, ಕೊಡುಗೆಗಳನ್ನು ತಿಳಿಯುತ್ತ ಅಮೂಲ್ಯ ಮಾರ್ಗದರ್ಶನವನ್ನು ಪಡೆದಿದ್ದೇನೆ. ಈಗ ನನ್ನ ಮುಂದಿನ ಹೊಸ ಮಾರ್ಗಕ್ಕೆ, ಈ ಎಲ್ಲ ಮಹನೀಯರ ಅನುಭವದ ತಳಪಾಯ ಹಾಕಿ ವಿನೂತನ ಕಾರ್ಯಕ್ರಮಗಳನ್ನು ನಮ್ಮ ಸದಸ್ಯರೊಂದಿಗೆ ಚರ್ಚಿಸಿ ನಿರ್ಮಿಸಿದ್ದೇನೆ. ಸೃಷ್ಟಿಸಿಕೊಂಡ ಈ ಹೊಸ ಹೆಜ್ಜೆಗಳಿಗೆ ಪ್ರೇರಣೆ ದೊರಕಿದ್ದು, ನಮ್ಮ ಪೂರ್ವಸೂರಿಗಳಾದ ಎಲ್ಲ ಅಧ್ಯಕ್ಷರಿಂದ, ಆದ್ದರಿಂದಲೇ ಇಂದು ಲೋಕಾರ್ಪಣೆಗೊಳ್ಳುತ್ತಿರುವ ಗ್ರಂಥಕ್ಕೆ 'ಕರ್ನಾಟಕ ಸಾಹಿತ್ಯ ಅಕಾಡೆಮಿ– ೫೦ ಹೆಜ್ಜೆಗುರುತು' ಎಂದು ಹೆಸರಿಟ್ಟಿದ್ದೇವೆ. ಇದೊಂದು ಅಪರೂಪದ ದಾಖಲೆ ಗ್ರಂಥವಾಗಲಿದೆ. ಅಷ್ಟೆ ಅಲ್ಲ ಬರುವ ದಿನಗಳಲ್ಲಿ ಇದೊಂದು ಸಾಂದರ್ಭಿಕ ಮಹತ್ವದ ವಿರಳ ಗ್ರಂಥವೂ ಆಗಲಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ಥಾಪಿತವಾದದ್ದು ೧೯೬೧ರಲ್ಲಿ. ೨೦೧೧ರಲ್ಲಿ ಇದರ ಸುವರ್ಣ ಮಹೋತ್ಸವವಾಗಬೇಕಿತ್ತು. ಕಾರಣಾಂತರಗಳಿಂದ ಆಗಲಿಲ್ಲವಾದ್ದರಿಂದ ಈಗ ನಮ್ಮ ಕಾಲಾವಧಿಯಲ್ಲಿ ೨೦೧೪ರಲ್ಲಿ ಆಗುತ್ತಿರುವುದು ನಮ್ಮ ಸುದೈವವೆಂದೇ ಭಾವಿಸುತ್ತೇನೆ.

ಪ್ರಾರಂಭದಲ್ಲಿ ಎಸ್.ಆರ್.ಕಂಠಿ, ಕೆ.ವಿ. ಶಂಕರೇಗೌಡರು, ಎ.ಆರ್. ಬದರಿನಾರಾಯಣ್, ಎಂ. ಮಲ್ಲಿಕಾರ್ಜುನಸ್ವಾಮಿ, ಆರ್.ಗುಂಡೂರಾವ್, ಕೆ.ಎಚ್. ಶ್ರೀನಿವಾಸ್– ಈ ಆರೂ ಜನ ಮಂತ್ರಿಗಳು ರಾಜ್ಯ ಸಾಹಿತ್ಯ ಅಕಾಡೆಮಿಯ ಚುಕ್ಕಾಣಿಯನ್ನು ಹಿಡಿದಿದ್ದರು. ಅನಕೃ ತದನಂತರ ಶ್ರೀರಂಗರ ಅವಧಿ. ಇವರ ಅವಧಿಯಲ್ಲಿ ಪ್ರಕಟವಾದ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಪ್ರಥಮ ಪುಸ್ತಕವೇ 'ಕನ್ನಡದಲ್ಲಿ ಅರವಿಂದ ದರ್ಶನ', ಡಾ.ಎಂ.ಶಿವರಾಂ ಅಕಾಡೆಮಿ ಕಾರ್ಯಗಳನ್ನು ಮುಂದುವರೆಸಿದ ಬಳಿಕ ಬಂದ ಡಾ.ಹಾ.ಮಾ.ನಾಯಕ ಅವರು ಅಕಾಡೆಮಿಗೆ ಒಂದು ಖಚಿತವಾದ ಹೊಸ ರೂಪವನ್ನು ಕೊಟ್ಟದ್ದನ್ನು ನಾವಿಲ್ಲಿ ನೆನೆಯಬೇಕು. ಕೆ.ಎಸ್.ನಿಸಾರ್ ಅಹಮದ್ ಅವರು ವಿಶ್ವಕನ್ನಡ ಸಮ್ಮೇಳದಲ್ಲಿ ಪ್ರಮುಖ ಪಾತ್ರವಹಿಸಿ ಯಶಸ್ವಿಯಾಗಿ ನಡೆಸಿಕೊಟ್ಟದ್ದು ಅವಿಸ್ಮರಣೀಯ. ಬಳಿಕ ಅಧ್ಯಕ್ಷರಾದ ಡಾ.ಜಿ.ಎಸ್.ಶಿವರುದ್ರಪ್ಪ ಅವರು ಅಕಾಡೆಮಿಯ ಬಹುಮಾನ ಯೋಜನೆಗಳಿಗೆ ಹೊಸ ಆಯಾಮಗಳನ್ನು ಕೊಟ್ಟರಲ್ಲದೆ ಅವರ 'ಕನ್ನಡ ಸಾಹಿತ್ಯ

ಪಾರಿಭಾಷಿಕ ಮಾಲೆ'ಯ ಹತ್ತು ಕೃತಿಗಳು ಮತ್ತು 'ಭಾರತೀಯ ಸಾಹಿತ್ಯ ಸಮೀಕ್ಷೆ' ಮತ್ತು 'ಸಾಲುದೀಪಗಳು' ಪ್ರಕಟಣೆಯ ಕಾರ್ಯ ಸಾಹಿತ್ಯ ಅಕಾಡೆಮಿಗೆ ಕಿರೀಟಪ್ರಾಯವಾದ ಸೇವೆ. ಡಾ.ಬರಗೂರು ರಾಮಚಂದ್ರಪ್ಪ ಅವರು ಹಲವಾರು ಹೊಸ ಯೋಜನೆಗಳ ಹರಿಕಾರರಾಗಿ, ಕ್ರಿಯಾಶೀಲ ಕಿರಿಯ ಅಧ್ಯಕ್ಷರಾಗಿದ್ದನ್ನು ನಾವಿಲ್ಲಿ ಗಮನಿಸಬೇಕು. 'ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆ'ಯ ೧೨ ಸಂಪುಟಗಳ, ಮತ್ತು 'ಉಪಸಂಸ್ಕೃತಿ ಮಾಲೆ'ಯ ೩೭ ಸಂಪುಟಗಳ ಪ್ರಕಟಣೆ ಅಲ್ಲದೆ ಹಲವಾರು ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಸಾಹಿತ್ಯ ಅಕಾಡೆಮಿಗೆ ಹೊಸ ಚೈತನ್ಯವನ್ನು ತುಂಬಿದರು. ಶ್ರೀ ಶಾಂತರಸರು ಸಕ್ರಿಯವಾಗಿ ಸೇವೆ ಸಲ್ಲಿಸಿದ ಇನ್ನೊಬ್ಬ ಅಧ್ಯಕ್ಷರು. 'ಮುತ್ತಿನಹಾರ' ಮಾಲಿಕೆಯಲ್ಲಿ ೯೩ ಪುಸ್ತಕಗಳು ಇವರ ಅವಧಿಯಲ್ಲಿ ಪ್ರಕಟವಾದದ್ದು ಒಂದು ಪ್ರಶಂಸನೀಯ ಕಾರ್ಯವೇ ಸರಿ. ಡಾ.ಗಿರಡ್ಡಿ ಗೋವಿಂದರಾಜ ಅವರ ಕೊಡುಗೆಯೂ ವಿಶಿಷ್ಟವಾದದ್ದು. 'ಶತಮಾನದ ಸಣ್ಣಕಥೆ, ಕಾವ್ಯ, ವಿಮರ್ಶೆ, ಪ್ರಬಂಧ, ಸಂಶೋಧನೆ, ಮಕ್ಕಳ ಸಾಹಿತ್ಯ–ಬೃಹತ್ ಸಂಪುಟಗಳು ಪ್ರಕಟವಾದದ್ದು ಅಲ್ಲದೆ 'ಸಾಲುದೀಪಗಳು' ಮರುಮುದ್ರಣವಾದದ್ದನ್ನು ನಾವು ಶ್ಲಾಘಿಸಬೇಕು. ಡಾ.ಗುರುಲಿಂಗ ಕಾಪಸೆ ಅವರ 'ಕವಿ–ಕೃತಿ' ಆಧುನಿಕ ಚಿಂತನ ಮಾಲೆ'ಯ ಆರು ಸಂಪುಟಗಳ ಪ್ರಕಟಣೆ ಇವರ ಅವಧಿಯಲ್ಲಿಯ ಉತ್ತಮ ಸಾಧನೆಯಾಗಿದೆ. ಡಾ.ಗೀತಾ ನಾಗಭೂಷಣರ ವಿಶೇಷ ಕೊಡುಗೆ – 'ಸಂಸ್ಕೃತಿ ಮಹಿಳಾ ಮಾಲಿಕೆ'ಯ ೮ ಸಂಪುಟಗಳು. ಪ್ರೊ.ಎಂ.ಎಚ್.ಕೃಷ್ಣಯ್ಯ ಅವರು ಕರ್ನಾಟಕದ ಎಲ್ಲ ಕವಿಗಳ 'ಸ್ವಂತ ಕವಿತೆಯ ಓದು' ಶೀರ್ಷಿಕೆಯಡಿ ಕವಿಗಳು ತಾವೇ ವಾಚಿಸಿರುವ ಕವನಗಳನ್ನು ಧ್ವನಿ, ದೃಶ್ಯ ಮಾಧ್ಯಮದ ಮೂಲಕ ಅಕಾಡೆಮಿಯ ಜಾಲತಾಣಕ್ಕೆ ಅಳವಡಿಸಿಕೊಂಡದ್ದು ಒಂದು ಅಪೂರ್ವ ದಾಖಲೆಯಾಗಿದೆ.

ನಮ್ಮ ಕಾರ್ಯಚಟುವಟಿಕೆಗಳಿಗೆ ಕಾಲಕಾಲಕ್ಕೆ ಪ್ರೋತ್ಸಾಹ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ಉಮಾಶ್ರೀ ಅವರನ್ನು, ಪ್ರಧಾನ ಕಾರ್ಯದರ್ಶಿಗಳಾದ ಡಾ.ಶಾಲಿನಿ ರಜನೀಶ್ ಅವರನ್ನು, ನಿರ್ದೇಶಕರಾದ ಶ್ರೀ.ಕೆ.ಎ.ದಯಾನಂದ ಅವರನ್ನು, ಜಂಟಿ ನಿರ್ದೇಶಕರಾದ ಶ್ರೀ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅವರನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ಈ ಗ್ರಂಥದ ಲೋಕಾರ್ಪಣೆಯ ಸಂದರ್ಭದಲ್ಲಿ ಇದರ ಲೇಖಕರಾದ ಶ್ರೀ ಸುರೇಶ್ ಮೂನ ಮತ್ತು ಶ್ರೀ ಎನ್.ಜಗನ್ನಾಥಪ್ರಕಾಶ್ ಅವರನ್ನು ಅಕಾಡೆಮಿಯು ಹೃದಯಪೂರ್ವಕವಾಗಿ ನೆನೆಯುತ್ತದೆ.

ಚಂದದ ಮುಖಪುಟವನ್ನು ರಚಿಸಿಕೊಟ್ಟ ಶ್ರೀ ಕೃಷ್ಣ ರಾಯಚೂರ್ ಅವರನ್ನು, ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಸ್ವಾನ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಕೃಷ್ಣಮೂರ್ತಿ ಅವರನ್ನು, ಈ ಪುಸ್ತಕ ಯೋಜನೆಯ ಪ್ರತಿಯೊಂದು ಹಂತದಲ್ಲಿ ನನ್ನೊಂದಿಗಿದ್ದು, ಕೆಲಸ ಮಾಡುತ್ತಿರುವ ನಮ್ಮ ರಿಜಿಸ್ಟ್ರಾರ್ ಶ್ರೀಮತಿ ಸಿ.ಎಚ್.ಭಾಗ್ಯ ಅವರನ್ನು ಮತ್ತು ನನ್ನ ಎಲ್ಲ ಯೋಜನೆಗಳಿಗೆ ಸಹಕಾರ ನೀಡುತ್ತಿರುವ ಅಕಾಡೆಮಿಯ ಸರ್ವಸದಸ್ಯರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ನನ್ನ ಬಲಗೈಯಂತೆ ಸದಾ ಪಕ್ಕದಲ್ಲಿದ್ದು ಸೇವೆ ಸಲ್ಲಿಸುತ್ತಿರುವ ಸಾಹಿತ್ಯ ಅಕಾಡೆಮಿಯ ಸಿಬ್ಬಂದಿ ಶ್ರೀಮತಿ ಟಿ.ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀ ವಿ.ಹರೀಶಕುಮಾರ್ ಮತ್ತು ಶ್ರೀ ಮಹದೇವ ಅವರನ್ನು ನಾನೆಂದೂ ಮರೆಯಲಾರೆ.

**ಮಾಲತಿ ಪಟ್ಟಣಶೆಟ್ಟಿ**